# ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

*Office of the*
*Executive Engineer(Ele),*
*O & M Divison, Gescom,,*
*Koppal.*

ಕಾರ್ಯನಿರ್ವಾಹಕ ಅಭಿಯಂತರರು(ವಿ),
ರವರ ಕಛೇರಿ,
ಕಾರ್ಯ ಮತ್ತು ಪಾಲನೆ ವಿಭಾಗ,
ಗು.ವಿ.ಸ.ಕಂ.ನಿ., ಕೊಪ್ಪಳ,

18 DEC 2021

ಸಂಖ್ಯೆ: ಕಾನಿಅ/ಸಕಾನಿಅ(ವಿ)/ಸ(ಲೆಂ)/ಕೊಪ್ಪಳ/21-22/4049-52

## "ಗ್ರಾಹಕರ ಸಂವಾದ ಹಾಗೂ ಕುಂದು ಕೊರತೆ ಸಭೆಯ ನಡುವಳಿಗಳು"

ಶ್ರೀ. ಎಮ್.ಎಸ್. ಪತ್ತಾರ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಜೆಸ್ಕಾಂ, ಕೊಪ್ಪಳ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 18.12.2021 ರಂದು 11:00 ಗಂಟೆಗೆ ಕೊಪ್ಪಳ ವಿಭಾಗ ಕಛೇರಿಯ ಸಭಾಂಗಣದಲ್ಲಿ **"ಗ್ರಾಹಕರ ಸಂವಾದ ಹಾಗೂ ಕುಂದು ಕೊರತೆ ಸಭೆಯನ್ನು"** ನಡೆಸಲಾಯಿತು. ಸಭೆಯಲ್ಲಿ ಈ ಕೆಳಗಿನಂತೆ ಆಧಿಕಾರಿಗಳು ಮತ್ತು ನೌಕರರು ಹಾಜರಾಗಿದ್ದರು.

**ಅಧಿಕಾರಿಗಳು;**

1) ಶ್ರೀ. ಎಮ್.ಎಸ್ ಪತ್ತಾರ ಕಾನಿಅ(ವಿ), ಕಾ & ಪಾ ವಿಭಾಗ ಜೆಸ್ಕಾಂ, ಕೊಪ್ಪಳ.
2) ಶ್ರೀ. ಮೋಟ್ಲ ನಾಯ್ಕ ಎಂ. ಸ.ಕಾ.ನಿ.ಅ(ವಿ), ಜೆಸ್ಕಾಂ ಉಪ-ವಿಭಾಗ, ಕೊಪ್ಪಳ.
3) ಶ್ರೀ. ಅಮಾಜಪ್ಪ ಕುರಿ ಪ್ರ.ಸ.ಇಂ(ತಾಂ), ಜೆಸ್ಕಾಂ ಉಪ-ವಿಭಾಗ, ಕೊಪ್ಪಳ.
4) ಶ್ರೀ. ರವಿ ಸಹಾಯಕ ಲೆಕ್ಕ ಅಧಿಕಾರಿಗಳು ಜೆಸ್ಕಾಂ, ಉಪ-ವಿಭಾಗ, ಕೊಪ್ಪಳ.
5) ಶ್ರೀ. ಶರಣಪ್ಪ ಶಾಖಾಧಿಕಾರಿಗಳು ಶಾಖೆ-3 ಜೆಸ್ಕಾಂ ಉಪ-ವಿಭಾಗ, ಕೊಪ್ಪಳ.
6) ಶ್ರೀ. ಕೃಷ್ಣ ಕಿರಿಯ ಸಹಾಯಕ, ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಜೆಸ್ಕಾಂ, ಕೊಪ್ಪಳ.

ಸಭೆಗೆ ಆಗಮಿಸಿದ ಅಧಿಕಾರಿಗಳಿಗೆ ಮತ್ತು ಗ್ರಾಹಕರಿಗೆ ಸ್ವಾಗತಿಸುತ್ತಾ, ಗ್ರಾಹಕರ ಮನವಿಗಳನ್ನು ಸಲ್ಲಿಸಲು ಕೋರಲಾಯಿತು. ಈ ಕೆಳಗಿನಂತೆ ಮನವಿಗಳು ಸ್ವೀಕೃತಗೊಂಡಿರುತ್ತವೆ.

1) ಶ್ರೀ. ಮಾನ್ವಿಪಾಷಾ ಮಾಜಿ ನಗರ ಸಭೆ ಸದಸ್ಯರು ಸಾ: ಕೊಪ್ಪಳ ರವರು ಹಸನ್ ರಸ್ತೆಯ ಖಬರ್‌ಸ್ತಾನ ಪ್ರದೇಶದಲ್ಲಿರುವ ಎರಡು ವರ್ಷ ಅವಧಿ ಪೂರ್ಣಗೊಂಡ ತಾತ್ಕಾಲಿಕ ವಿದ್ಯುತ್ ಸ್ಥಾವರಗಳನ್ನು ತಮ್ಮ ಗಮನಕ್ಕೆ ಇದ್ದು ವಿದ್ಯುತ್ ನಿಲುಗಡೆಗೊಳಿಸಲು ಕೋರಿರುತ್ತಾರೆ. ಅದರಂತೆ ಸದರಿ ರವರ ಮನವಿಯನ್ನು ಕೂಡಲೇ ಸಂಬಂಧಪಟ್ಟ ಶಾಖಾಧಿಕಾರಿ ಘಟಕ-1 ಜೆಸ್ಕಾಂ, ಕೊಪ್ಪಳ ರವರಿಗೆ ತಿಳಿಸಿ ತುರ್ತಾಗಿ ಸ್ಥಳ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಂಡು ವರದಿ ನೀಡಲು ಸೂಚಿಸಲಾಯಿತು.

2) ಶ್ರೀ. ಗ್ಯಾನಪ್ಪ ಹಂದ್ರಾಳ ರವರು ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ತಾವು ಹಣ ಪಾವತಿಸಿದ್ದು ಅದಕ್ಕೆ ಸಂಬಂಧಪಟ್ಟಂತೆ ಪರಿವರ್ತಕದ ಅನುಮೋದನೆ ಆಗಿದ್ದು ತಮಗೆ ಟಿ.ಸಿ. ಅನ್ನು ಒದಗಿಸುವಂತೆ ಕೋರಿರುತ್ತಾರೆ. ಅದರಂತೆ ಪರಿಶೀಲಿಸಿ ಈ ಬಗ್ಗೆ ತಕ್ಷಣವೇ ಕ್ರಮವಹಿಸಿ ಸದರಿ ರವರ ಮನವಿಯನ್ನು ಪರಿಗಣಿಸಲಾಗುವುದೆಂದು ತಿಳಿಸಲಾಯಿತು.

3) ಶ್ರೀ. ಶಿವನಗೌಡ ಸಾ: ಬುಡಶೇಟ್ಟನಾಳ ರವರ ಟಿ.ಸಿ. ಓವರ್ ಲೋಡ್ ಆಗಿರುತ್ತದೆ ಹಾಗೂ ಸದರಿ ಟಿ.ಸಿ ಅನ್ನು ಸರಿಪಡಿಸಲು ಕೋರಿ ಮನವಿಯನ್ನು ಸಲ್ಲಿಸಿದರು. ಸದರಿ ಗ್ರಾಹಕರ ಮನವಿಯಂತೆ ಕೂಡಲೇ ಸಂಬಂಧಪಟ್ಟ ಶಾಖಾಧಿಕಾರಿ ಘಟಕ-2 ರವರಿಗೆ ತಿಳಿಸಿ ತುರ್ತಾಗಿ ಸ್ಥಳ ಪರಿಶೀಲಿಸಿ ಕ್ರಮ ಕೈಗೊಂಡು ಅದರ ವರದಿಯನ್ನು ಈ ಕಛೇರಿಗೆ ನೀಡಲು ಸೂಚಿಸಲಾಯಿತು.

4) ಶ್ರೀ. ಡಿ. ಮಲ್ಲಿಕಾರ್ಜುನ ರವರ ಮೆ: ಗಂಗಾ ಸ್ಟೋನ್ ಕ್ರಷರ್ಸ ಟನಕನಕಲ್‌ದ ಆರ್.ಆರ್.ಸಂಖ್ಯೆ: TNHT-57 ರ ಸ್ಥಾವರದ ಚಾಲ್ತಿ ವಿದ್ಯುತ್ ಬಿಲ್ಲನ್ನು ಮಾತ್ರ ಸಂದಾಯ ಮಾಡಲು ಕೋರಿರುತ್ತಾರೆ. ಆದರೆ ಸದರಿ ರವರ ಮನವಿಯನ್ನು ಪರಿಗಣಿಸಿ ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವೃತ್ತ ಜೆಸ್ಕಾಂ, ಕೊಪ್ಪಳ ಕಾರ್ಯಸ್ಥಾನ: ಮುನಿರಾಬಾದ ರವರ ಆದೇಶದಂತೆ ಶೇ 50% ರಷ್ಟು ವಿದ್ಯುತ್ ಬಿಲ್ಲಿನ ಹಣವನ್ನು ಸಂದಾಯ ಮಾಡಲು ಸೂಚಿಸಲಾಯಿತು.

5) ಎನ್.ಕೆ ಎಲೆಕ್ಟ್ರೀಕಲ್ಸ ಗುತ್ತಿಗೆದಾರರಾದ ಶ್ರೀ. ಮಹಮ್ಮದ ಕಿರ್ಮಾನಿ, ರವರು ಕೊಪ್ಪಳ ಉಪ-ವಿಭಾಗದ ಕ್ಯಾಷ್ ಕೌಂಟರ್-2 ಅನ್ನು ಪ್ರತಿ-ದಿನ ಬೆಳಗ್ಗೆ ಪ್ರಾರಂಭಸಲು ಕೋರಿರುತ್ತಾರೆ. ಸದರಿ ರವರ ಮನವಿಯನ್ನು ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಯವರಿಗೆ ಕೂಡಲೇ ತಿಳಿಸಿ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

ಸಭೆಯ ಅಂತ್ಯದಲ್ಲಿ ಸಭೆಯಲ್ಲಿ ಭಾಗವಹಿಸಿದ ಗ್ರಾಹಕರಿಗೆ ವಿದ್ಯುಚ್ಛಕ್ತಿ ಬಳಸುವಾಗ ಸುರಕ್ಷತೆಯ ಬಗ್ಗೆ ಗಮನ ಹರಿಸಲು ತಿಳಿಸಲಾಯಿತು. ಹಾಗೂ ಆನ್‌ಲೈನ್ ಬಿಲ್ಲು ಪಾವತಿಗಳ ಬಗ್ಗೆ ತಿಳಿಸಿ ಕೊಡಲಾಯಿತು. ಮನವಿಗಳ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಕುಂದು ಕೊರತೆಗಳನ್ನು ಆದಷ್ಟು ಬೇಗ ಬಗೆಹರಿಸಲಾಗುವುದೆಂದು ತಿಳಿಸಿ, ಸಭೆಗೆ ಹಾಜರಾಗಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಿರುವುದಕ್ಕೆ ವಂದನೆಯನ್ನು ಸಲ್ಲಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

18/12/24

ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾ ಮತ್ತು ಪಾ ವಿಭಾಗ,
ಜೆಸ್ಕಾಂ, ಕೊಪ್ಪಳ.

ಪ್ರತಿಯನ್ನು ದಯಾಪರ ಮಾಹಿತಿಗೆ ಸಲ್ಲಿಸಿದೆ.

1) ಮಾನ್ಯ ಮುಖ್ಯ ಅಭಿಯಂತರರು, ವಲಯ ಕಛೇರಿ, ಜೆಸ್ಕಾಂ, ಬಳ್ಳಾರಿ.
2) ಮಾನ್ಯ ಅಧೀಕ್ಷಕ ಅಭಿಯಂತರರು(ವಿ), ಕಾ & ಪಾ ವೃತ್ತ ಕಛೇರಿಗೆ ಜೆಸ್ಕಾಂ, ಕೊಪ್ಪಳ(ಮುನಿರಾಬಾದ).
3) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಜೆಸ್ಕಾಂ, ಕೊಪ್ಪಳ ರವರ ಸೂಕ್ತ ಕ್ರಮಕ್ಕಾಗಿ.
4) ಸ.ಅ(ತಾಂ)/ಮು.ಕ.